ರಂಜನೆ ಉಳಿಸ್ಕಂಡ್ರೆ ಜನ ಕರೀತಾರೆ. ಇಲ್ಲ ಅಂದ್ರೆ ಜನ ಕೈಬುಟ್ ಬುಡತಾರೆ. ಸರಿ ಇಲ್ಲ ಕಣ್ಲ, ದಮ್ಮಿಲ್ಲ ಅಂದ್ಬುಡ್ತಾರೆ. ಇಲ್ಲಿರ ಕಲಾವಿದ್ರನ್ನೆ ನೋಡ್ತವ್ನಿ. ಒಬ್ಬೊಬ್ರುದು ಒಂದೊಂದು ರೀತಿ ಕಲೆ. ಒಬ್ಬ ಛಲಗಾರ, ಒಬ್ಬ ಕಲೆಗಾರ, ಒಬ್ಬ ಮೋಡಿಗಾರ, ಯಾವ ಜಾಗದಲ್ಲಿ ಯಾವ ಆಟ ಕಟ್ಟಬೇಕು ಅಂತ ತಿಳೀದಿರಂವ. ತಮ್ಗೆ ತಾವೇ ಬೆಳೀತಾವ್ರೆ... ಯಾರಲ್ಲಿ ಏನ್ ಒಳ್ಳೇದು ಅದನ್ನ ನಾನು ಕಾಣ್ಬೇಕು'.

ಯಾವ ತರಬೇತಿಯ, ಮಾರ್ಗದರ್ಶನದ ಸಹಾಯವೇ ಇಲ್ಲದೆ, ತಮ್ಮನ್ನು ತಾವೇ ಇವರು ನಿಧಾನವಾಗಿ ಬೆಳೆಸಿಕೊಳ್ಳುತ್ತಾ ಹೋಗುತ್ತಾರೆ. ಬಹಳವೆಂದರೆ ಇವರ ಓರಗೆಯವರು, ಸ್ನೇಹಿತರು ಇವರನ್ನು ಹುರಿದುಂಬಿಸುತ್ತಾರೆ.

ನೀಲಗಾರ ಮಹದೇವಯ್ಯನವರು ತಂದೆಯನ್ನು ಕಳೆದುಕೊಂಡು 'ಇನ್ನು ಮುಂದೆ ಹಾಡು ಕಥೆ ಏನೂ ಬೇಡ' ಎಂದುಕೊಂಡಾಗ ಗೆಳೆಯನೊಬ್ಬ, 'ಲೇ ಅಣ್ಣಯ್ಯಾ ಸತ್ತವನು ನಿಮ್ಮಪ್ಪ ಒಬ್ಬ ಅಷ್ಟೇ. ನೀನು ಪದ ಹೇಳಿದರೆ ಕೇಳಾಂತ ದೇಸ ಸತ್ತೋಯ್ತಾ? ಗುಡ್ಡರು ಹೋದರಾ? ಗುರುಗಳು ಹೋದರಾ? ಅವರೆಲ್ಲ ಅವರೇ. ನಮ್ಮ ಕಣ್ಣ ಮುಂದೇನೇ ಅವರೆ'.

ಇವರ ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ ದಂಗು ಬಡಿಸುವಂತಹದ್ದು. ಸೋತು ಕೈಚೆಲ್ಲಿದಾಗಲೆಲ್ಲ ಮತ್ತೆ ಕೊಡವಿಕೊಂಡು ಎದ್ದು, 'ಬಂದದ್ದೆಲ್ಲ ಬರಲಿ ಗೋವಿಂದನ ದಯೆಯೊಂದಿರಲಿ' ಎಂದು ತಾವು ನಂಬಿದ ದೈವವನ್ನು ಬೈಯದೇ, ಗೊಣಗದೇ ಅಳುವ ಕಡಲಿನಲ್ಲಿ ನಗೆಯ ಹಾಯಿದೋಣಿಯನ್ನು ನಡೆಸಲು ಮುಂದಾಗುತ್ತಾರೆ.

ಮಳವಳ್ಳಿ ಮಹದೇವಸ್ವಾಮಿ ಅವರ ತಂದೆಗೆ ಕೋಪವೋ ಕೋಪ; ಮಗ ಶಾಲೆ ಬಿಟ್ಟು ಸಿನಿಮಾ ನೋಡಲು ಹೋಗುತ್ತಾನಲ್ಲ ಎಂದು. ಹಾಡು ಬೇಡವೆಂದಲ್ಲ, ಶಿಕ್ಷಣ ಇದ್ದರೆ ಜೀವನಕ್ಕೆ ಒಂದು ದಾರಿಯಾದೀತು ಎನ್ನುವ ತಂದೆಯ ಸಹಜ ಅಭಿಲಾಷೆ ಅವರದು. ಹಾಡು, ಅಭಿನಯ ಎಲ್ಲದರಲ್ಲೂ ಆಸಕ್ತನಾದ ಹುಡುಗನ ಮೇಲಿನ ಕೋಪದಿಂದ ಹಾಡುಗಾರರ ಬಳಿ ಬಿಟ್ಟು 'ಈತನಿಗೆ ಹಾಡು ಹಸೆ ಕಲಿಸಿ' ಎನ್ನುತ್ತಾರೆ. ಆತನೋ ಮನಸುಖರಾಯ. ಆತನ ಕುಡಿತ ಮತ್ತೊಂದು ಎನ್ನುವ ಹವ್ಯಾಸದಲ್ಲಿ ಮನಸ್ಸು ಬಂದಾಗ ಮನಸ್ಸು ಬಂದಷ್ಟು ಕಲಿಸುವವ. ಇಂಥ ಪರಿಪಾಟಲಿನಲ್ಲಿ ಕಲಿತ ಇವರು ಎಲ್ಲಿಂದ ಎಲ್ಲಿಯ ತನಕವೂ ತಮ್ಮ ಕಲೆಯ ಬಳ್ಳಿಯನ್ನು ಹಬ್ಬಿಸುತ್ತಲೇ ಹೋದರು. ಕ್ಯಾಸೆಟ್ ವ್ಯವಹಾರದಲ್ಲಿ ಗೆದ್ದರೂ ಕೊನೆಗೆ ತಮ್ಮವರೇ ಮೋಸ ಮಾಡುತ್ತಾರೆ. ಆದರೆ ಆ ಮೋಸಕ್ಕೆ ತಕ್ಕ ಶಾಸ್ತಿಯನ್ನು ಮಾಡಿ ಮುಂದುವರಿಯುತ್ತಾರೆ. ಈಗ ಕೋಟ್ಯಂತರ ಸಂಪಾದಿಸಿದ್ದಾರಾದರೂ ಅದೇ ಮಂಟೆಸ್ವಾಮಿಯ ಹಾಡಿನ ಕೃಪೆಯಿಂದ ಎನ್ನುವ ಕೃತಜ್ಞತೆಯಲ್ಲಿಯೇ ಇಂದಿಗೂ ಬದುಕು ನಡೆಸುತ್ತಿದ್ದಾರೆ. ನಮ್ಮ ಗಮನ ಇರಬೇಕಾದ್ದು ಇವರ ದೈವ ಶರಣಾಗತಿಯ ಬಗೆಗಲ್ಲ; ಬಾಳಿಗೊಂದು ನಂಬಿಕೆಯನ್ನು ಅಚಲವಾಗಿ ಉಳಿಸಿಕೊಂಡಿರುವುದರ ಬಗೆಗೆ.

ಮಹಾಮಹಿಮರ ಬಾಳುಗಳ ಎದುರಿಗೆ ಮಹಾ ಬದುಕನ್ನೇ ಬದುಕಿದವರು ಇವರು ಎನ್ನುವುದು ಉತ್ಪ್ರೇಕ್ಷೆಯಲ್ಲ. ಬಾಳ್ವೆಯ ಒಲಿಮ್ಯಾಗ ಸುಟ್ಟು ಸುಟ್ಟು ಹೋಗಬಹುದಾಗಿದ್ದರೂ ಸುಡಲೀಯದೇ ಬೆಂಕಿಯನ್ನೇ ಹೂವಾಗಿ ಅರಳಿಸಿಕೊಂಡ ಇವರನ್ನು ಜೀವಮಾನದಲ್ಲಿ ಒಮ್ಮೆ ನೋಡಿ ಕಣ್ತುಂಬಿಕೊಳ್ಳಬೇಕು.

ತೀವ್ರ ಕಾಲುನೋವಿನಿಂದ ನರಳುತ್ತಿದ್ದ ಹೆಂಡತಿಯನ್ನು ಸೈಕಲ್‌ನಲ್ಲಿ ತಬ್ಬಿ ಕೂರಿಸಿಕೊಂಡು, ಕ್ಯಾಸೆಟ್ ತಯಾರಿಕೆಗಾಗಿ ಬೇರೊಂದು ಹಳ್ಳಿಗೆ ಹೋಗಿ, ಯಾರಿಗೂ ಹೇಳದೇ ಅಲ್ಲಿ ಹೆಂಡತಿಯನ್ನು ಬೆಡ್‌ಶೀಟ್‌ನಿಂದ ಮುಚ್ಚಿ, ಒಂದು ಕೈಯಲ್ಲಿ ಅವಳ ಕಾಲು ಒತ್ತುತ್ತಲೇ ಹಾಡಿನ ಅಭ್ಯಾಸ ನಡೆಸುವುದನ್ನು ಏನೇನೆಂದು ಕರೆಯಬಹುದು? ಹೆಂಡತಿಯ ಮೇಲಿನ ಪ್ರೀತಿಯೆಂದೆ? ಕಲೆಯ ಮೇಲಿನ ಅನುರಕ್ತಿಯೆಂದೆ? ಬದುಕಿನ ಅಪರಿಹಾರ್ಯ ಗಳಿಗೆಯೆಂದೆ? ●